**ದಿನಾಂಕಃ 02.12.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ವಕೀಲರಿಂದಃ**

ದಿ.27.03.2025 ರಿಂದ ಇಲ್ಲಿಯವರೆಗೂ ಸರ್ವೇಯಾಗಿರುವ ಬಗ್ಗೆ ವಿಚಾರಣೆ ಮಾಡಿರುವುದಿಲ್ಲ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸದರಿ ದಾಖಲೆಯು ಮಾಹಿತಿ ಹಕ್ಕ ಕಾಯ್ದೆಅಡಿ ಪಡೆದಂತಹ ರಿ ಸರ್ವೇ ನಂ.65 ಮತ್ತು ಸರ್ವೇ ನಂ.161 ಹಾಗೂ 164 ರ ನಕ್ಷೆಯಾಗಿದ್ದು ಅದರಲ್ಲಿ ಬ್ಲಾಕ್ ಅಥವಾ ಸರ್ವೇ ನಂ.161 ಮತ್ತು 164 ರಲ್ಲಿ 2 ನೇ ಪ್ರತಿವಾದಿಯ ಹೆಸರು ಇರುತ್ತದೆ ಎಂದರೆ ಸರಿ. ಸಾಕ್ಷಿಯು ನೋಡಿ ಗುರುತಿಸಿದ ದಾಖಲೆಯನ್ನು ನಿಡಿ-1 ಎಂದು ಗುರುತಿಸಲಾಯಿತು. ಸದರಿ ದಾಖಲೆಯಲ್ಲಿ 2 ನೇ ಪ್ರತಿವಾದಿಯು ಸರ್ವೇ ನಂ.161 ಮತ್ತು 164 ರಲ್ಲಿ ಸ್ವಾಧೀನಲ್ಲಿದ್ದಾರೆಂದರೆ ಸರಿ ಹಾಗೂ ಮುಂದುವರೆದು 164 ರಲ್ಲಿ 15 ರಿಂದ 20 ಗುಂಟೆ ಜಾಗದಲ್ಲಿ ನಾನು ಸ್ವಾಧೀನಲ್ಲಿರುತ್ತೇನೆ.

ನನ್ನ ವಾದ ಪತ್ರದ 4 ನೇ ಖಂಡಿಕೆಯಲ್ಲಿ ಹಾಗೂ ನನ್ನ ಸಾಕ್ಷ್ಯ ಪ್ರಮಾಣ ಪತ್ರದ 5 ನೇ ಖಂಡಿಕೆಯಲ್ಲಿ ಪ್ರತಿವಾದಿಯರು ಬಿ ಅನುಸೂಚಿ ಸ್ವತ್ತಿನ ಮಾಲೀಕರಾಗಿದ್ದಾರೆಂದು ತಿಳಿಸಿರುವುದಿಲ್ಲ. ಸರ್ವೇ ನಂ.164 ರಲ್ಲಿ 15 ರಿಂದ 20 ಗುಂಟೆ ಜಾಗದಲ್ಲಿ ನಾನು ಸ್ವಾಧೀನಲ್ಲಿರುತ್ತೇನೆಂದು ನನ್ನ ವಾದ ಪತ್ರದಲ್ಲಿ ಮತ್ತು ಸಾಕ್ಷ ಪ್ರಮಾಣಪತ್ರದಲ್ಲಿ ತಿಳಿಸಿರುವುದಿಲ್ಲ. ನಾನು ಈವರೆಗೂ ದಾವಾಸ್ವತ್ತಿನ ಸ್ವಾಧೀನಲ್ಲಿ ಇರುತ್ತೇನೆಂದು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

ಸರ್ವೇ ನಂ.161 ಮತ್ತು 164 ರ ದಕ್ಷಿಣಕ್ಕೆ ರಾಷ್ಟೀಯ ಹೆದ್ದಾರಿಯ ಸಂಖ್ಯೆ 207 ಇರುತ್ತದೆ ಹಾಗೂ ಸದರಿ ರಸ್ತೆಯು ಹೊಸಕೋಟೆ ದಾಬಾಸಪೇಟೆ ಯಿಂದ ತುಮಕೂರಿಗೆ ಹೋಗುವ ರಸ್ತೆಯಾಗಿದ್ದು ರಾಷ್ಟೀಯ ಹೆದ್ದಾರಿ ಪ್ರಾಧಿಕಾರದವರು ಹೆದ್ದಾರಿಗಾಗಿ ಭೂಮಿಯನ್ನು ಸ್ವಾ ಧೀನಪಡಿಸಿಕೊಂಡಿರುತ್ತಾರೆಂದರೆ ಸರಿ. ಸ್ವಾ ಧೀಪಡಿಸಿಕೊಂಡ ನಂತರ ಪರಿಹಾರ ಮೊತ್ತವನ್ನು ನರಸಮ್ಮರವರು ಪಡೆದಿರುತ್ತಾರೆಂದು ಸಾಕ್ಷಿಯು ಉತ್ತರಿಸಿರುತ್ತಾರೆ. ಸ್ವಾ ಧೀನದ ಪರಿಹಾರದ ಮೊತ್ತವು ನನಗೆ ಬಂದಿಲ್ಲವೆಂಬ ಕಾರಣವನ್ನು ಇಟ್ಟುಕೊಂಡು ಪ್ರತಿವಾದಿಯ ವಿರುದ್ದ ಸುಳ್ಳು ದಾವೆಯನ್ನು ಹೂಡಿರುತ್ತಾರೆಂದರೆ ಸರಿಯಲ್ಲ.

2 ನೇ ಪ್ರತಿವಾದಿಯು ಯಲಹಂಕದಲ್ಲಿ ವೈದ್ಯರಾಗಿರುತ್ತಾರೆ. ದಿ.21.03.2021 ರಂದು ನಾನು ಹೇಳಿದ ಹಾಗೆ ಯಾವುದೇ ಘಟನೆ ನಡೆದಿರುವುದಿಲ್ಲ ಹಾಗೂ ಅದಕ್ಕೆ ಸಂಬಂಧಿಸಿದಂತೆ ದೂರನ್ನು ನೀಡಲು ಪೊಲೀಸ್ ಠಾಣೆಗೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಪೋಡಿಯಾದ ನಂತರ 1 ನೇ ಪ್ರತಿವಾದಿಯು 2 ನೇ ಪ್ರತಿವಾದಿಯ ಹೆಸರಿಗೆ ದಾವಾಸ್ವತ್ತಿನ ಬಿ ಅನುಸೂಚಿ ಸ್ವತ್ತನ್ನು ಮಾರಾಟ ಮಾಡಿರುತ್ತಾರೆಂದರೆ ಸರಿ. ಪೋಡಿ ಮಾಡುವ ಸಮಯಕ್ಕೆ ನನಗೆ ನೋಟೀಸ್ ನ್ನು ಜಾರಿ ಮಾಡಿರುವುದಿಲ್ಲ.

ಪ್ರತಿವಾದಿಯರು ನನ್ನ ಸ್ವತ್ತಿನ ದಾವಾಸ್ವತ್ತಿನ ಅನುಸೂಚಿ ಎ ಸ್ವತ್ತಿಗೆ ಹಾಗೂ ಅದರ ಸ್ವಾ ಧೀನಕ್ಕೆ ತೊಂದರೆ ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿಯು ಸಾಕ್ಷಿಯು ಸರ್ವೇ ನಂ.164 ಕ್ಕೆ

ಕಂಪೌಂಡ್ ಹಾಕಲು ಬಂದಿರುತ್ತಾರೆ ಹಾಗೂ ಆ ರೀತಿ ತೊಂದರೆ ಕೊಟ್ಟಿರುತ್ತಾರೆಂದು ನುಡಿಯುತ್ತಾರೆ. 2 ನೇ ಪ್ರತಿವಾದಿಯು ನನ್ನ ಸ್ವಾ ಧೀನಕ್ಕೆ ತೊಂದರೆ ಕೊಟ್ಟಿರುವುದಿಲ್ಲ ಪರಿಹಾರದ ಮೊತ್ತ ಬಂದಿಲ್ಲವೆಂದು ಅವರ ವಿರುದ್ದ ಸುಳ್ಳು ದಾವೆಯನ್ನು ಹೂಡಿರುತ್ತೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

**(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ದೊಡ್ಡಬಳ್ಳಾಪುರ.**